ಮಾಡುವ ತನಕ ಕಟ್ಟುಕಟ್ಟೆ ಕಟ್ಟಬೇಕು. ಮರಗಳ ಕಟಾವು ಮತ್ತು ಕಟ್ಟುವ ಕೆಲಸವನ್ನು ಜಮೀನಿನ ಮಾಲೀಕರೇ ಅರಣ್ಯ ರಕ್ಷಕನ ಮೇಲ್ವಿಚಾರಣೆಯಲ್ಲಿ ನಿರ್ವಹಿಸಬೇಕು.

ಎ) ಒಂದುವೇಳೆ ಮಾಲೀಕರು ಕಟಾವುಮಾಡಿರುವ ಶ್ರೀಗಂಧದ ತುಂಡುಗಳನ್ನು ಸರ್ಕಾರದ ಗಂಧದ ಕೋಠಿಗೆ ಇಲಾಖಾವತಿಯಿಂದ ಸಾಗಾಣೆ ಮಾಡುವುದಿದ್ದಲ್ಲಿ ನಿಯಮ 155 ರನ್ವಯ ಸಾಗಾಣಿಕೆ ರಹದಾರಿ ಫಾರಂ ನಂ.38ನ್ನು ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿ ಅಥವಾ ಅಧೀನ ಅಧಿಕಾರಿ ಉಪವಲಯ ಅರಣ್ಯ ಅಧಿಕಾರಿಗೆ ಕಡಿಮೆಯಿಲ್ಲದ ದರ್ಜೆಯ ಅಧಿಕಾರಿಗೆ ಅಧಿಕಾರವನ್ನು ವಲಯ ಅರಣ್ಯ ಅಧಿಕಾರಿಯು ಮಾಲೀಕರಿಗೆ ಫಾರಂ ನಂ.15ರಲ್ಲಿ ಸ್ವೀಕೃತಿಯನ್ನು ನೀಡಿದ ನಂತರವೇ ಅನುಮತಿಯನ್ನು ನೀಡಬೇಕಿದೆ. ಸಾಗಾಣಿಕೆಯ ಸಮಯದಲ್ಲಿ ಅರಣ್ಯ ರಕ್ಷಕನು ಕಡ್ಡಾಯವಾಗಿ ಶ್ರೀಗಂಧದ ಮರದ ತುಂಡುಗಳೊಂದಿಗೆ ವಾಹನದಲ್ಲಿ ಇರಬೇಕು. ಮಾಲೀಕರು ಇಚ್ಛೆಪಟ್ಟಲ್ಲಿ ಸಾಗಾಣಿಕೆಯನ್ನು ಸ್ವಂತ ಖರ್ಚಿನಲ್ಲಿ ಮಾಡಬಹುದು.

ಬಿ) ಮಾಲೀಕರು ಕಟಾವು ಮಾಡಿದ ಶ್ರೀಗಂಧದ ಮರವನ್ನು ಸರ್ಕಾರಿ ಸ್ವಾಮಿತ್ವದ ಸಂಸ್ಥೆಗಳಿಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಸಾಗಾಣಿಕೆಯನ್ನು ನಿಯಮ 155ರ ಅನ್ವಯ ಕಳುಹಿಸಬೇಕಾದ ಸ್ಥಳಕ್ಕೆ ರಹದಾರಿ ನಂಬರ್ 38Aರಲ್ಲಿ ವಲಯ ಅರಣ್ಯ ಅಧಿಕಾರಿಗಳಿಂದ ಅಥವಾ ಉಪವಲಯ ಅರಣ್ಯ ಅಧಿಕಾರಿಗಳಿಗೆ ಕಡಿಮೆ ದರ್ಜೆಯಲ್ಲದ ಅಧಿಕಾರಿಗೆ ವಲಯ ಅರಣ್ಯ ಅಧಿಕಾರಿಗಳಿಂದ ಪ್ರತ್ಯಾಜಿಸಿದ, ಅಧಿಕಾರಿಯು ನಂತರ ಸಾಗಾಣಿಕೆಗೆ ರಹದಾರಿ ನೀಡತಕ್ಕದ್ದು. ಶ್ರೀಗಂಧದ ಮರವನ್ನು ಸ್ವೀಕರಿಸಿದ ಸರ್ಕಾರಿ ಸ್ವಾಮಿತ್ವದ ಸಂಸ್ಥೆಯು ಫಾರಂ ನಂ.15A ರಲ್ಲಿ ಮಾಲೀಕನಿಗೆ ಸ್ವೀಕೃತಿ ನೀಡಬೇಕು ಮತ್ತು ಅದರ ಒಂದು ಪ್ರತಿಯನ್ನು ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿ ಹಾಗೂ ಅದರ ಮತ್ತೊಂದು ಪ್ರತಿಯನ್ನು ಸ್ವೀಕರಿಸಿದ ಸರ್ಕಾರಿ ಸ್ವಾಮಿತ್ವದ ಸಂಸ್ಥೆಯು ಇಟ್ಟುಕೊಳ್ಳಬೇಕು.

ಸಿ) ಒಂದು ವೇಳೆ ಮಾಲೀಕರು ಕಟಾವು ಮಾಡಿರುವ ಶ್ರೀಗಂಧದ ಮರವನ್ನು ಸರ್ಕಾರದ ಗಂಧದ ಕೋಠಿಗಾಗಲಿ ಅಥವಾ ಸರ್ಕಾರಿ ಸ್ವಾಮಿತ್ವದ ಸಂಸ್ಥೆಗಳಿಗಾಗಲಿ ಮಾರಾಟ ಮಾಡಲು ಇಚ್ಛಿಸಿದ್ದಲ್ಲಿ, ಅಂತಹ ಮಾಲೀಕರು ಫಾರಂ ನಂ.31ರಲ್ಲಿ ಅರ್ಜಿಯನ್ನು ಖುದ್ದಾಗಿ ಅಥವಾ ಇ–ಮೇಲ್ ಮುಖಾಂತರ ಆನ್‌ಲೈನ್‌ನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕು. ಇಂತಹ ಅರ್ಜಿಗಳನ್ನು ಸ್ವೀಕರಿಸಿದ ನಂತರ ಉಪಅರಣ್ಯ ಸಂರಕ್ಷಣಾಧಿಕಾರಿಯು ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿಗಳ ಸ್ಥಳ ತನಿಖೆಗಾಗಿ ಹಾಗೂ ವರದಿಪಡೆಯಲು ಕಳುಹಿಸಬೇಕು ಹಾಗೂ ವರದಿ ಪಡೆದ ನಂತರವೇ ಸಾಗಾಣಿಕೆಗೆ ರಹದಾರಿಯನ್ನು ನೀಡತಕ್ಕದ್ದು.

5) ಶ್ರೀಗಂಧದ ತುಂಡುಗಳನ್ನು ಸರ್ಕಾರಿ ಶ್ರೀಗಂಧದ ಕೋಠಿಗೆ ತಂದಾಗ, ಅಲ್ಲಿರುವ ಅಧಿಕಾರಿಯು ತಂದಿರುವ ಪ್ರಮಾಣ ಮತ್ತು ಅಳತೆಯನ್ನು ಪರಿಶೀಲಿಸಿ, ಸ್ವೀಕೃತಿಯನ್ನು ಶ್ರೀಗಂಧದೊಡನೆ ಬಂದಿರುವ ಅರಣ್ಯ ರಕ್ಷಕನಿಗೆ ನೀಡಲಾಗುವುದು. ತದನಂತರ, ಶ್ರೀಗಂಧದ ಕೊರಡುಗಳನ್ನು ಕೆತ್ತಿ, ಸರಿಪಡಿಸಿ, ವಿವಿಧ ಗುಂಪುಗಳಾಗಿ ವಿಂಗಡಿಸುವರು (Classify) ಮತ್ತು ಅವುಗಳ ತೂಕವನ್ನು ಕರ್ನಾಟಕ ಅರಣ್ಯ ಕೋಡ್‌ನಂತೆ ಸರ್ಕಾರಿ ಡಿಪೋಗಳಲ್ಲಿ ನಿರ್ವಹಿಸುವಂತೆ ಕ್ರಮ ತೆಗೆದುಕೊಳ್ಳುವರು. ಶ್ರೀಗಂಧದ ಮಾಲೀಕರಾಗಲಿ ಅಥವಾ ತಂದಿರುವ ಏಜೆಂಟರುಗಳಾಗಲಿ ಶ್ರೀಗಂಧವನ್ನು ಪರಿಷ್ಕರಿಸುವಾಗ, ಡ್ರೆಸ್ ಮಾಡಿ ವಿವಿಧ ಗುಂಪುಗಳಾಗಿ ವಿಂಗಡಿಸುವಾಗ ಮತ್ತು ತೂಕ ಮಾಡುವಾಗ ಉಪಸ್ಥಿತರಿರಬಹುದು. ಡಿಪೋದ ಅಧಿಕಾರಿಯು ನಂತರ ಸರ್ಕಾರಿ ಡಿಪೋ ಇರುವ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಶ್ರೀಗಂಧವನ್ನು ಡಿಪೋದಲ್ಲಿ ಸ್ವೀಕರಿಸಿರುವುದಕ್ಕೆ ಹಾಗೂ ಅಂತಿಮವಾಗಿ ಎಷ್ಟು ಪ್ರಮಾಣದ ಶ್ರೀಗಂಧವನ್ನು ಪಡೆಯಲಾಗಿದೆಯೆಂದು ಫಾರಂ ನಂ.16 ರಲ್ಲಿ ವರದಿ ಸಲ್ಲಿಸಿ, ಪ್ರತಿಯನ್ನು ಯಾವ ವಲಯ ಅರಣ್ಯ ಅಧಿಕಾರಿಗಳ ವ್ಯಾಪ್ತಿಯಿಂದ ಪಡೆಯಲಾಗಿದೆಯೋ ಅವರಿಗೆ ಹಾಗೂ ಮಾಲೀಕರಿಗೆ ಕಳುಹಿಸಲಾಗುವುದು. ತದನಂತರ ಡಿಪೋ ಅಧಿಕಾರಿಯು ಬಿಲ್ಲನ್ನು ಅಂತಿಮವಾಗಿ ಪಡೆದಂತಹ ಶ್ರೀಗಂಧ ಮತ್ತು ಅದರ ಮಾಲೀಕರಿಗೆ ಪಾವತಿಸುವ ಹಣದ ಮೌಲ್ಯವನ್ನು ತಯಾರಿಸಿ ಶ್ರೀಗಂಧ ಡಿಪೋ ಇರುವ ವ್ಯಾಪ್ತಿಯ ಉಪಅರಣ್ಯ ಸಂರಕ್ಷಣಾಧಿಕಾರಿಗಳಿಗೆ, ಮಾಲೀಕರಿಗೆ ಹಣ ಪಾವತಿಸುವ ಸಲುವಾಗಿ ಕಳುಹಿಸಲಾಗುವುದು. ಉಪಅರಣ್ಯ ಸಂರಕ್ಷಣಾಧಿಕಾರಿ ಸ್ವೀಕರಿಸಿದ ಬಿಲ್ಲನ್ನು ಪರಿಶೀಲಿಸಿ ಮಾಲೀಕರಿಗೆ ಹಣ ಪಾವತಿಸಲಾಗುವುದು.

6) ಮಾಲೀಕರಿಂದ ಪಡೆದ ಶ್ರೀಗಂಧಕ್ಕೆ ಯಾವ ಬೆಲೆಯನ್ನು ನೀಡಬೇಕೆಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರತಿ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ನಡೆಯುವ ಶ್ರೀಗಂಧದ ಹರಾಜಿನಲ್ಲಿ ಪಡೆಯುವ ಸರಾಸರಿ ಬೆಲೆಯನ್ನು ಆಧರಿಸಿ ಬೆಲೆಯನ್ನು ನಿರ್ಧರಿಸುವರು. ಒಂದು ವೇಳೆ ಸಂಬಂಧಿಸಿದ ಆರ್ಥಿಕ ವರ್ಷದಲ್ಲಿ ಯಾವುದೇ ಶ್ರೀಗಂಧದ ಹರಾಜು ನಡೆಯದಿದ್ದಲ್ಲಿ, ತಮಿಳುನಾಡು ರಾಜ್ಯದ ಹರಾಜಿನಲ್ಲಿ ಪಡೆದ ಸರಾಸರಿ ಬೆಲೆಯನ್ನು ಆಧರಿಸಿ, ಶ್ರೀಗಂಧಕ್ಕೆ ಬೆಲೆಯನ್ನು ನಿರ್ಧರಿಸುವರು. ಕಳೆದ ಎರಡು ಹರಾಜಿನಲ್ಲಿ ಪಡೆದ ಸರಾಸರಿ ಬೆಲೆಯನ್ನು ಆಧಾರವಾಗಿಟ್ಟುಕೊಳ್ಳಲಾಗುವುದು. ಸಾಗಾಣಿಕೆ ವೆಚ್ಚವನ್ನು ಇಲಾಖೆಯೇ ಭರಿಸಿದ್ದಲ್ಲಿ, ಅದಕ್ಕೆ ತಗುಲಿದ ವೆಚ್ಚವನ್ನು, ಶ್ರೀಗಂಧದ ಕೊರಡುಗಳನ್ನು ಕೆತ್ತಿ ಪರಿಷ್ಕರಿಸಲು ತಗುಲಿದ ವೆಚ್ಚ, ಮೇಲ್ವಿಚಾರಣಾ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಸೇರಿಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ನಿರ್ಧರಿಸಿದಂತೆ, ಇಲಾಖೆಯಿಂದ ವೆಚ್ಚ ಮಾಡಿದ ಹಣವನ್ನು ಕಟಾಯಿಸಿಕೊಂಡು ಬಾಕಿ ಹಣವನ್ನು ಮಾಲೀಕರಿಗೆ ತಕ್ಷಣದಲ್ಲಿಯೇ ಪಾವತಿಸಲು ಅಂದರೆ ಡಿಪೋದಲ್ಲಿ ಶ್ರೀಗಂಧವನ್ನು ಸ್ವೀಕರಿಸಿ, ನೀಡಿದ ರಸೀತಿಯಲ್ಲಿಯ ದಿನಾಂಕದಿಂದ ಮೂರು ತಿಂಗಳೊಳಗಾಗಿ ಪಾವತಿಸಬೇಕಿದೆ.

**ರೂಲ್–122**ರಲ್ಲಿ ಯಾವುದೇ ವ್ಯಕ್ತಿಯು, ಉಪ ಅರಣ್ಯ ಸಂರಕ್ಷಣಾಧಿಕಾರಿಯು ನೀಡಿರುವ ಆದೇಶದ ವಿರುದ್ಧ ಅಹವಾಲುಗಳಿದ್ದಲಿ, ಮಾಲೀಕರು ಆದೇಶವನ್ನು ಸ್ವೀಕರಿಸಿದ 30 ದಿವಸಗಳೊಳಗಾಗಿ ಸಂಬಂಧಿಸಿದ ವ್ಯಾಪ್ತಿಯ ವೃತ್ತದ ಅರಣ್ಯಾಧಿಕಾರಿಗಳಿಗೆ (ಅಂದರೆ ಅರಣ್ಯ ಸಂರಕ್ಷಣಾಧಿಕಾರಿ/ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ) ಬರವಣಿಗೆಯಲ್ಲಿ ದೂರನ್ನು ನೀಡಬಹುದು ಹಾಗೂ ವೃತ್ತ ಅರಣ್ಯಾಧಿಕಾರಿಯು ತೆಗೆದುಕೊಳ್ಳಬಹುದಾದ ತೀರ್ಮಾನವೇ ಅಂತಿಮವಾಗುತ್ತದೆ. 30 ದಿವಸಗಳ ನಂತರ ಸ್ವೀಕರಿಸಿದ ಯಾವುದೇ ಅಹವಾಲುಗಳನ್ನು ಪರಿಗಣಿಸಲಾಗುವುದಿಲ್ಲ.